ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ
ಶ್ರೀರಂಗಪಟ್ಟಣ
ಸಿಸಿ 76/2020 ಸಿಡಬ್ಲ್ಯೂ : 2 ಪಿ ಡಬ್ಲ್ಯೂ : 1

| | |
|---|---|
| ಹೆಸರು | ರಾಮಚಂದ್ರ |
| ತಂದೆಯ ಹೆಸರು | ನಿರ್ವಾಣಯ್ಯ |
| ವಯಸ್ಸು | 47 ವರ್ಷ |
| ವೃತ್ತಿ | ವ್ಯಾಪಾರ |
| ವಾಸ | ಹುಣಸೂರು |

ದಿನಾಂಕ: 11.12.2023 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದ:</u>

1. ಚಾಸಾ1, 3 ರಿಂದ 9 ರವರ ಪರಿಚಯವಿಲ್ಲ. ನಾನು ಆರೋಪಿಯನ್ನು ನೋಡಿರುವುದಿಲ್ಲ. ಈ ಪ್ರಕರಣದಲ್ಲಿ ಅಭಿ ಎಂಬ ಹುಡುಗ ಮರಣ ಹೊಂದಿರುವುದು ಗೊತ್ತು. ಸುಮಾರು 3 ವರ್ಷಗಳ ಹಿಂದೆ ನಾನು ಬೆಂಗಳೂರಿಗೆ ಹೋಗಿ ಹುಣಸೂರಿಗೆ ನನ್ನ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದಾಗ ಶ್ರೀರಂಗಪಟ್ಟಣದ ಹಳ್ಳಿಮನೆ ಹೊಟೇಲ್ ನ ಹತ್ತಿರ ನನ್ನ ಪಕ್ಕದಲ್ಲಿ ಒಂದು ಹೋಂಡಾ ಆಕ್ಟೀವಾ ದಲ್ಲಿ ಒಬ್ಬ ಹುಡುಗ ಸವಾರಿ ಮಾಡುತ್ತಿದ್ದು, ನಮ್ಮ ಮುರೆ ಒಂದು ಟಿಪ್ಪರ್ ಲಾರಿ ಹೋಗುತ್ತಿತ್ತು. ಆಗ ಟಿಪ್ಪರ್ ಲಾರಿ ಚಾಲಕ ಸಡನ್ ಬ್ರೇಕ್ ಹಾಕಿದ್ದು, ಹೋಂಡಾ ಆಕ್ಟೀವಾ ಚಲಾಯಿಸುತ್ತಿದ್ದ ಹುಡುಗ ಟಿಪ್ಪರ್ ಲಾರಿಗೆ ಹೋಗಿ ಡಿಕ್ಕಿ ಮಾಡಿರುತ್ತಾನೆ. ಸದರಿ ಆಕ್ಟೀವಾ ಸ್ಕೂಟರ್ ನಲ್ಲಿ ಇಬ್ಬರು ಇದ್ದು, ಇಬ್ಬರು ಬಿದ್ದುಹೋಗಿರುಗಿತ್ತಾರೆ. ಅದರಲ್ಲಿ ಹಿಂದೆ ಕುಳಿತ ಸಣ್ಣ ಹುಡುಗನಿಗೆ ಜೀವ ಇದ್ದು, ಸ್ಕೂಟರ್ ಚಲಾಯಿಸುತ್ತಿದ್ದ ಚಾಲಕ ಸ್ದಳದಲ್ಲೇ ಮೃತ ಪಟ್ಟಿರುತ್ತಾನೆ. ಬೈಕ್ ಸವಾರನಿಗೆ ತಲೆಗೆ ಪೆಟ್ಟಾಗಿದ್ದು, ಮುಖ ಪಂಚರ್ ಆದ ಹಾಗೆ ಆಗಿತ್ತು, ಹಿಂದೆ ಕುಳಿತಿದ್ದ ಹುಡುಗನಿಗೆ

ತಲೆಗೆ ಸ್ವಲ್ಪ ಪೆಟ್ಟಾಗಿತ್ತು. ಅಲ್ಲಿಗೆ ಆಂಬುಲೆನ್ಸ್ ಬಂದು ಇಬ್ಬರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನನಗೆ ಟಿಪ್ಪರ್ ಲಾರಿ ಹಾಗೂ ಸ್ಕೂಟರ್ನ ನೊಂದಣಿ ನಂಬರ್ ಗಳು ಗೊತ್ತಿಲ್ಲ. ಟಿಪ್ಪರ್ ಲಾರಿಯ ಚಾಲಕ ಸಡನ್ ಆಗಿ ಬ್ರೇಕ್ ಹಾಕಿದ ಕಾರಣ ಅಪಘಾತವಾಗಿರುತ್ತದೆ. ಆ ದಿನ ಸ್ಕೂಟರ್ ಚಾಲಕ ಮತ್ತು ನನ್ನ ವಾಹನದ ಸ್ಪೀಡ್ ನ 40 ರ ಒಳಗೆ ಇತ್ತು. ನನಗೆ ಟಿಪ್ಪರ್ ಲಾರಿ ಚಾಲಕ ಯಾವ ವೇಗದಲ್ಲಿ ವಾಹನ ಚಲಾಯಿಸುತ್ತಿದ್ದ ಎಂದು ನನಗೆ ಗೊತ್ತಿಲ್ಲ. ಆ ದಿನ ತುಂತುರು ಮಳೆ ಬರುತ್ತಿದ್ದು, ಯಾರೂ ವಾಹನಗಳನ್ನು ವೇಗವಾಗಿ ಓಡಿಸುತ್ತಿರಲಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು , ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲು ಃ ಎ ಪಿ ಪಿ ರವರಿಂದಃ

2. ದಿಃ 06.06.2020 ರ ರಾತ್ರಿ 8 ಗಂಟೆಗೆ ಬೆಂಗಳೂರು- ಮೈಸೂರು ಹೆದ್ದಾರಿಯ ರುಚಿ ಮನೆ ಹೋಟೇಲ್ ಬಳಿ ಅಪಘಾತವಾಗಿರುತ್ತದೆ ಎಂದರೆ ಸರಿ. ಆ ದಿನ ಟಿಪ್ಪರ್ ಲಾರಿ ಚಾಲಕ ರಸ್ತೆ ಮಧ್ಯೆದಲ್ಲಿ ತನ್ನ ಟಿಪ್ಪರ್ ಲಾರಿಯನ್ನು ರಸ್ತೆಯ ಮಧ್ಯೆದಲ್ಲಿ ಅಡ್ಡಾದಿಡ್ಡಿಯಾಗಿ ಚಲಾಯಿಸುತ್ತಿದ್ದು, ಯಾವುದೇ ಸೂಚನೆ ಕೊಡದೇ ಸಡನ್ ಆಗಿ ರಸ್ತೆಯ ಮಧ್ಯೆದಲ್ಲಿ ತನ್ನ ಟಿಪ್ಪರ್ ಲಾರಿಯನ್ನು ನಿಲ್ಲಿಸಿರುತ್ತಾನೆ ಎಂದರೆ ಸರಿ. ಆ ಸಂದರ್ಭದಲ್ಲಿ ಅಭಿಲಾಷ್ ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನವು ಸದರಿ ಟಿಪ್ಪರಿ ಲಾರಿಗೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿ. ಆಗ ನಾನು ನನ್ನ ಬೈಕನ್ನು ನಿಲ್ಲಿಸಿ ಅಲ್ಲಿ ಹೋಗಿ ನೋಡಿರುತ್ತೇನೆ ಎಂದರೆ ಸರಿ. ಆ ದಿನ ಅಭಿಲಾಷ್ ಚಲಾಯಿಸುತ್ತಿದ್ದ ವಾಹನವು ಹೋಂಡಾ ಆಕ್ಟೀವಾ ಕೆಎ-41-ಇ ಎಂ-9236 ಆಗಿತ್ತು ಎಂದರೆ ಸಾಕ್ಷಿ ನೋಂದಣಿ ಸಂಖ್ಯೆ ಗೊತ್ತಿಲ್ಲ, ಆದರೆ ಹೋಂಡಾ ಆಕ್ಟೀವಾ ಎಂದು ನುಡಿಯುತ್ತಾರೆ. ಟಿಪ್ಪರ್ ಲಾರಿಯ ಸಂಖ್ಯೆ ಕೆ ಎ-01-ಟಿಸಿ -9325 ಎಂದರೆ ಸರಿ.

ಹೋಂಡಾ ಆಕ್ಟೀವಾದಲ್ಲಿ ಹಿಂಬದಿಯಲ್ಲಿ ಮತ್ತೊಬ್ಬ ಕುಳಿತಿದ್ದ ಎಂದರೆ ಸರಿ. ನಾನು ಮತ್ತು ಸಾರ್ವಜನಿಕರು ಅವರುಗಳನ್ನು ಉಪಚರಿಸಿ ಆಂಬುಲೆನ್ಸ್ ನಲ್ಲಿ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ ಎಂದರೆ ಸರಿ. ದಿಃ 14.06.2020 ರಂದು ನಾನು ಅಪಘಾತಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಆಗ ಆಕ್ಟೀವಾ ಓಡಿಸುತ್ತಿದ್ದ ವ್ಯಕ್ತಿಯ ಹೆಸರು ಅಭಿಲಾಷ್ ಬಿನ್ ಶಂಕರೇಗೌಡ, ಡಣಾಯಕನಪುರ ಗ್ರಾಮ, ಹಾಗೂ ಹಿಂಬದಿಯಲ್ಲಿ ಕುಳಿತಿದ್ದವರ ಹೆಸರು ಪವನ್ ಕುಮಾರ್ ಬಿನ್ ಪ್ರಕಾಶ್, ಬೆಂಗಳೂರು ಎಂದು ತಿಳಿಯಿತು ಎಂದರೆ ಸರಿ. ಅಪಘಾತಕ್ಕೊಳಗಾದ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. ಟಿಪ್ಪರ್ ಲಾರಿಯನ್ನು ಅದರ ಚಾಲಕ ಅಡ್ಡಾದಿಡ್ಡಿಯಾಗಿ ಓಡಿಸಿ, ಮಧ್ಯ ರಸ್ತೆಯಲ್ಲಿ ಯಾವೆದೇ ಸೂಚನೇ ನೀಡದೇ ನಿಲ್ಲಿಸಿದ ಕಾರಣ ಅಪಘಾತ ಸಂಭವಿರುತ್ತದೆ ಎಂದರೆ ಸರಿ . ಆ ದಿನ ಟಿಪ್ಪರ್ ಲಾರಿಯನ್ನು ಚಲಾಯಿಸುತ್ತಿದ್ದ ವ್ಯಕ್ತಿ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯಾಗಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಆ ದಿನ ಟಿಪ್ಪರ್ ಲಾರಿಯನ್ನು ಚಲಾಯಿಸುತ್ತಿದ್ದ ವ್ಯಕ್ತಿ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯೇ ಆಗಿದ್ದು, ಅಪಘಾತವಾಗಿ 3 ವರ್ಷವಾದ ಕಾರಣ ನನಗೆ ನೆನಪಿಲ್ಲ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಗೈರುಹಾಜರಿದ್ದು ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಗಿದೆ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಶ್ರೀರಂಗಪಟ್ಟಣ .